ಹೇಳಿದೆ: ನಿನ್ನದೇ ಕೊನೆ ಮಾತು. ಒಂದು ಇಂಚೂ ಬದಲಿಲ್ಲ ಹೇಳು. ನನ್ನ ಹುಟ್ಟೂರು ಯಾವತ್ತೂ ಅಲ್ಲೇ ಇರುತ್ತೆ. ನೀನು ಹೇಳಿದ ಹಾಗೇ ಮಾಡೋಣ. ಇಲ್ ಕೇಳು, ಮಾದೇವ, ಅವತ್ತು ನಾನು ಆಡಿದ ಹಾಗೆ ಮಾಡ್ತೀನಿ ಅಂತ ಅವಳಿಗೆ ಅನ್ನಿಸಿಬಿಟ್ಟಿರಬೇಕು. ಎಷ್ಟು ದಿನದಿಂದ ಸೆರಗಲ್ಲಿ ಕಟ್ಟಿ ಇಟ್ಟುಕೊಂಡಿದ್ಲೋ ಏನೋ, ಅಖೈರು ಆಸೆ ಅನ್ನೋ ಥರ ಅಂದ್ಲು: ಬೆಂಗಳೂರಿಗೆ ಹೋಗೋಣ ಅಲ್ಲಿ ನಮ್ಮ ಗುಣ ಇದಾನೆ. ಗುಣ ಅಂದ್ರೆ ನನ್ನ ಮಗ ಗುಣಶೀಲ, ಮಗಳು- ಅಳಿಯ ಇದಾರೆ, ಮೊಮ್ಮಕ್ಕಳು ಇದಾವೆ! ಹೀಗೆಲ್ಲ ಹೇಳುವಾಗ ಅವಳ ಕಣ್ಣು ಇಷ್ಟು ಅಗಲ ಆಗಿತ್ತು! ಅವಳ ಮುಖ ಅಷ್ಟು ಅಗಲ ಅರಳಿದ್ದನ್ನು ನಾನು ನೋಡೇ ಇರಲಿಲ್ಲ! ನಾನು ಹಿಂದೆಮುಂದೆ ನೋಡ್ಲೇ ಇಲ್ಲ. ಆಯ್ತು ಅಂದೆ! ಪಾಪ! ನನ್ನ ಮಾತು ಮುಗಿದ ಮೇಲೂ ಅವಳು ಹೇಳ್ತಾನೆ ಇದ್ಲು... ಒಬ್ಬನೇ ಇದಾನೆ. ಎಷ್ಟು ಹೊತ್ತಿಗೆ ಮನೆಗೆ ಬರ್ತಾನೋ, ಏನ್ ಊಟ ಮಾಡ್ತಾನೋ, ಬಟ್ಟೆ ಯಾವಾಗ ತೊಳ್ಕೊತಾನೋ... ನಿಂಗೆ ಇವೆಲ್ಲ ಗೊತ್ತಾಗೋಲ್ಲ ಮಾದೇವ. ಹೆಂಡ್ರು- ಮಕ್ಕಳು ಅಂತ ಇದ್ದವ್ರಿಗೆ ಮಾತ್ರ ಇವೆಲ್ಲ ಅರ್ಥ ಆಗೋದು. ನನ್ನ ಹತ್ರ ದುಡ್ಡು ಇತ್ತು. ಪೆನ್ಷನ್ ಹಣವೂ ಬಂತು. ಮಹಾ ನಗರವನ್ನು ಹೊಕ್ಕೇಬಿಟ್ಟೆವು!

**ಸುಮಂಗಲ ಮತ್ತು ಸುನಂದಮ್ಮ:**

ನಾವು ಚೆನ್ನಾಗಿದೀವಿ... ನಿಮ್ಮ ಕಥೆ ಕೇಳಿ ಬೇಸರ ಆಯ್ತು. ಮೊದಲು ಗಂಡ ಓಡಿಹೋದ, ಆಮೇಲೆ ಮಗನೂ ಓಡಿಹೋದ! ಸದ್ಯ ಫೋನಾದ್ರು ಮಾಡ್ತಾನಲ್ಲ ಬಿಡಿ. ಯಾವತ್ತಾದ್ರೂ ಬಂದೇ ಬರ್ತಾನೆ! ಸರಿ. ಈ ಬೆಂಗಳೂರಿನ ಕಥೆ ಏನ್ ಕೇಳ್ತೀರಿ, ಊರಿನ ಥರ ಅಲ್ಲ ಇದು ಸುನಂದಮ್ಮ, ಎಲ್ಲವೂ ಮನೆ ಒಳಗೇ! ತರಕಾರಿ, ದಿನಸಿ, ಹಾಲು, ಹಣ್ಣು, ಹೂವು ಅಷ್ಟೇ ಅಲ್ಲ ಕಣ್ರೀ, ಯಾವ ದೇವ್ರ್ ಪ್ರಸಾದ ಬೇಕು ಹೇಳ್ರಿ... ತಿರುಪತಿ? ಗೋಕರ್ಣ? ಧರ್ಮಸ್ಥಳ? ಆನೆಗುಡ್ಡೆ? ಇಡುಗುಂಜಿ? ಸಿರ್ಸಿ-ಸಿಗಂದೂರು? ಮರುದಿನ ಬೆಳಗ್ಗೆ ಬಾಗಿಲಿಗೆ ಬಂದಿರುತ್ತೆ... ಇನ್ನು ನಮ್ಮ ಗುಣಶೀಲನಿಗೆ ಒಂದು ಮದುವೆ ಮಾಡಿಬಿಟ್ರೆ, ಆಮೇಲೆ ಇನ್ನೇನು? ಅವ್ರ ಸಂಸಾರ ನೋಡ್ತಾನೋಡ್ತಾ ಸುಖವಾಗಿ ಕಣ್ಣುಮುಚ್ಚಿ ಬಿಡೋದು... ನಮ್ ಗುಣಂಗೆ ಹೇಳಿದೀನಿ ನೋಡಪ್ಪ, ನಿಂಗೆ ಊರಿನ ಕಡೆ ಸಂಬಂಧ ಬ್ಯಾಡ ಅಂದ್ರೆ ಬಿಡು; ನಿನಗೆ ಒಪ್ಪಿಗೆ ಆಗೋ ಯಾರನ್ನಾದರೂ ಹೇಳು; ನಿನ್ನ ಅಪ್ಪ ಅಂತೂ ಖಂಡಿತಾ ಒಪ್ತಾರೆ; ಅಂತೂ ನಮಗೆ ನಿನ್ನ ಸಂಸಾರ ಚೆನ್ನಾಗಿದ್ರೆ ಸಾಕು. ಮುಂದೆ ಬದುಕಿ-ಬಾಳೋರು ನೀವೇ ತಾನೇ? ಅದಕ್ಕೆ ಅವ್ನು ಅಂದ, 'ಅಮ್ಮ, ಈಗ್ಲೇ ಅದಕ್ಕೇನು ಅವಸರ? ನನಗೆ ಇನ್ನು ಇಪ್ಪತ್ತೈದು! ಇಷ್ಟು ಬೇಗ ನನ್ನ ಕ್ಲಾಸ್ ಹುಡುಗೀರೆ ಮದುವೇ ಮಾಡ್ಕೊತ್ತಿಲ್ಲ! ಹೊಸಮನೆ ಗೃಹಪ್ರವೇಶ ಆಗಿ ವರ್ಷವೂ ಆಗಿಲ್ಲ. ನೀವು ಮೊದಲು ಬೆಂಗಳೂರಿನ ಲೈಫ್‌ಗೆ ಸ್ವಲ್ಪ ಹೊಂದಿಕೊಳ್ಳಿ. ಆಮೇಲೆ ನೋಡೋಣ.' ಅದಕ್ಕೆ ನಾನಂದೆ: ಹೌದಪ್ಪಾ, ಈಗ ಹುಡುಕ್ಲಿಕ್ಕೆ ಶುರು ಮಾಡಿದ್ರೆ, 2- 3 ವರ್ಷ ಅದ್ರಲ್ಲೇ ಕಳೆಯುತ್ತೆ. ಇನ್ನು ಹೊಸ ಊರಿಗೆ ಹೊಂದಿಕೊಳ್ಳೋದು ನಮಗೆ ಎಷ್ಟು ಅಭ್ಯಾಸ ಆಗ್ಬಿಟ್ಟದೆ ಅಂದ್ರೆ, ಅದೊಂಥರಾ ಹೊಸಬಟ್ಟೆಗೆ ಹೊಂದಿಕೊಂಡ ಹಾಗೆ ಕಣೋ. ನಾನು ಬೆಂಗಳೂರಿಗೆ ಹೋಗೋಣ ಅಂತ ನಿಮ್ಮ ಅಪ್ಪನಿಗೆ ಹೇಳಿದ್ದು ನಿಮ್ಮ ಸಂಸಾರ ನೋಡ್ಬೇಕು ಅಂತ. ನಮ್ಮದೆಲ್ಲ ಮುಗೀತಾ ಬಂತು ಕಣೋ... ಅವ್ನಿಗೆ ದೇವ್ರು ಅದೇನ್ ಬುದ್ಧಿ ಕೊಟ್ಟನೋ ಏನೋ, ಒಂದೇ ಮಾತಿಗೆ ಒಪ್ಪಿಕೊಂಡೆ ಬಿಟ್ಟ! ಹುಡುಗಿ ಮನೇವ್ರೆ ಮುಂದೆ ನಿಂತು ಮದ್ವೆ ಮಾಡಿಕೊಟ್ರು. ಬಂಗಾರದಂಥ ಹುಡುಗಿ! ಗುಣ, ರೂಪ, ಜಾಣತನ ಯಾವುದರಲ್ಲೂ ನನ್ನ ಮಗನಿಗೆ ಕಡಿಮೆ ಇಲ್ಲ. ಅಷ್ಟೇ ಅಲ್ಲ, ಸಂಬಳ ಕೂಡ ಅವನಿಗಿಂತ ಸ್ವಲ್ಪ ಜಾಸ್ತಿ! ಈಗಿನ ಹುಡುಗರ ಹಾಗೆ, ಮದುವೆ ಆದಮೇಲೆ 4- 5 ವರ್ಷ ಅಂತ ಮೊಮ್ಮಗುವಿಗಾಗಿ ನಮ್ಮನ್ನ ಕಾಯಿಸೋ ಥರಾ ಕಾಣೋಲ್ಲ. ದೇವ್ರು ನಡೆಸಿದ್ರೆ ಈ ವರ್ಷಾನೇ, ದೀಪಾವಳಿ ಎಡಬಲ ನಾನು ಅಜ್ಜಿ ಆದ್ರೂ ಆಗಬಹುದು! ಮಾತು ಎಷ್ಟು ಆಡಿದ್ರು ಮುಗಿಯೋದಿಲ್ಲ, ಸುನಂದಮ್ಮ, ನಾನೇ ಒಂದ್ಸಾರಿ ಆಕಡೆ ಬರ್ಬೇಕು ಅಂತಿದೆ, ಬರ್ತೀನಿ, ಆದ್ರೆ ಇನ್ನು ಎರಡು ವರ್ಷ ಆಗೋಲ್ಲ ಬಿಡಿ!

**ಏಕಾಂಬರ ತನ್ನಷ್ಟಕ್ಕೆ:**

ಮೊತ್ತಮೊದಲು ನನ್ನ ಹೆಸರನ್ನು ಹ್ರಸ್ವಗೊಳಿಸಿ ಕರೆದವನು ಈ ಗುಣಶೀಲ. ಯಾವ ಮುಹೂರ್ತದಲ್ಲಿ